# KANNADA EXECUTIVE SUMMARY

# FOR BUILDING STONE QUARRY

## SEIAA NO. 635 MIN 2021

## DT. 19.01.2022

# ಎಕ್ಸಕ್ಯೂಟಿವ್ ಸಮ್ಮರಿ

ಕರ್ನಾಟಕ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಮೆ. ಶ್ರೀ ಸಾಯಿರಾಮ ಸ್ಟೋನ್ ಕ್ರಷರ್ಸ್ ಅವರಿಗೆ ಪತ್ರ ಸಂಖ್ಯೆ : No. SG/KPL/DMG/GL/NTN-13/2020-21/1401. ದಿನಾಂಕ 13 ಜುಲೈ 2021 ರಂದು ಜಾರಿ ಮಾಡಿ 12 ಎಕರೆ (4.855 ಹೆಕ್ಟೇರ್) ಪಟ್ಟಾ ಭೂಮಿಯಲ್ಲಿ ಕಲ್ಲು ಮತ್ತು ಎಂ–ಸ್ಯಾಂಡ್ ಉತ್ಪಾದನೆಗಾಗಿ ಕಲ್ಲು ಗಣಿಗಾರಿಕೆ ನಡೆಸಲು ಕರ್ನಾಟಕ ಮೈನರ್ ಮಿನರಲ್ ಕನ್ಸಷನ್ ರೂಲ್ಸ್ 1994ರ (ತಿದ್ದುಪಡಿ – 2016)ರ ಪ್ರಕಾರ ಅನುಮತಿ ನೀಡಿದೆ.

ಮೆ. ಶ್ರೀ ಸಾಯಿರಾಮ ಸ್ಟೋನ್ ಕ್ರಷರ್ಸ್ ಸಂಸ್ಥೆಯು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ವೆಂಕಟಗಿರಿ ಗ್ರಾಮದ ಸರ್ವೇ ನಂ. 54ರಲ್ಲಿ ವಾಸಿಸುತ್ತಿರುವ ಶ್ರೀ ವಂಕಿನೇನಿ ವಂಶೀಧರ್ ಅವರ ನೇತೃತ್ವದಲ್ಲಿ ಇರುವ ಪಾಲುದಾರಿಕೆಯ ಸಂಸ್ಥೆ ಆಗಿದೆ.

ಮೆ. ಶ್ರೀ ಸಾಯಿರಾಮ ಸ್ಟೋನ್ ಕ್ರಷರ್ಸ್ ಸಂಸ್ಥೆಯು ಕರ್ನಾಟಕದ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ವಜ್ರಬಂಡಿ ಗ್ರಾಮದ ವ್ಯಾಪ್ತಿಯಲ್ಲಿ ಕಟ್ಟಡದ ಕಲ್ಲು ಗಣಿಗಾರಿಕೆ ನಡೆಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಪ್ರಸ್ತಾವಿತ ಕಟ್ಟಡ ಕಲ್ಲು ಮತ್ತು ಎಂ–ಸ್ಯಾಂಡ್ ಗಣಿ ಗುತ್ತಿಗೆ ಪ್ರದೇಶವು ಅಕ್ಷಾಂಶ 15° 40′ 36.47″ ಎನ್ ಯಿಂದ 15° 40′ 48.65″ ಎನ್ ಮತ್ತು ರೇಖಾಂಶ 76° 06′ 23.27″ ಇ ಯಿಂದ 76° 06′ 34.91″ ಇ ಆಗಿದೆ.

ಪ್ರಸ್ತಾವಿತ (ಶ್ರೀ ಸಾಯಿರಾಮ ಸ್ಟೋನ್ ಕ್ರಷರ್ಸ್) ಕಂಪನಿಯು ಉದ್ದೇಶಿತ ಸ್ಥಳದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಕರ್ನಾಟಕ ಸರ್ಕಾರದ ಕಂದಾಯ ಇಲಾಖೆ ದಿನಾಂಕ 16.04.2021 ಮತ್ತು ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ ದಿನಾಂಕ 18.11.2020 ರಂದು ನಿರಾಪೇಕ್ಷಣಾ ಪತ್ರವನ್ನು ಪಡೆದಿದೆ.

ಪ್ರಸ್ತಾವಿತ (ಉದ್ದೇಶಿತ) ಗಣಿ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳು ನಡೆಯುತ್ತಿಲ್ಲ.

ಪ್ರತಿಪಾದಕರು ಕರ್ನಾಟಕದ ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರಕ್ಕೆ (SEIAA) ಕ್ಕೆ ಅರ್ಜಿ ಸಲ್ಲಿಸಿ ಪರಿಸರ ಅನುಮತಿಗಾಗಿ ಕೋರಿದ್ದರು. ಪರಿಸರ ಪ್ರಭಾವದ ಮೌಲ್ಯಮಾಪನ (EIA) ಅಧ್ಯಯನ ನಡೆಸಲು EIA/ EMP ಕಟ್ಟಡ ಕಲ್ಲು ಗಣಿಗಾರಿಕೆ ಮತ್ತು ಎಂ–ಸ್ಯಾಂಡ್ ಗಣಿಗಾರಿಕೆಗಾಗಿ ಪತ್ರ ಸಂಖ್ಯೆ : SEIAA 635 MIN 2021, dated 19.01.2022 ರ ಪ್ರಕಾರ (ToR) ಗಳ ಅನ್ವಯ ಯೋಜನೆಯನ್ನು ಸಿದ್ಧಪಡಿಸಲಾಗುತ್ತದೆ.

ಪ್ರಸ್ತುತ ಸಾರಾಂಶವನ್ನು MOEF & CC ನ EIA ಅಧಿಸೂಚನೆ 2006 ರ ಅನುಬಂಧ 3ರಂತೆ EIA ಮತ್ತು ToR ಪ್ರಕಾರವೇ ಸಿದ್ಧಪಡಿಸಲಾಗಿದೆ.

ಪ್ರಸ್ತಾವಿತ ಕಟ್ಟಡ ಕಲ್ಲು ಗಣಿಗಾರಿಕೆಯಲ್ಲಿ ತೆರೆದ ಮತ್ತು ಸೆಮಿ ಮೆಕ್ಯಾನಿಕಲ್ ವ್ಯವಸ್ಥೆಯಲ್ಲಿ ಗಣಿಗಾರಿಕೆ ನಡೆಸಲಾಗುತ್ತಿದ್ದು, ವಾರ್ಷಿಕ ಉತ್ಪಾದನೆಯು ತ್ಯಾಜ್ಯ ಸೇರಿ ಒಟ್ಟು 5,12,153 ಟನ್. ಇದರಲ್ಲಿ 5,01,910 ಟನ್ ಉತ್ಪಾದನೆ ಬಳಕೆಗೆ ಮತ್ತು 10,243 ಟನ್ ತ್ಯಾಜ್ಯವಾಗಿರುತ್ತದೆ.

ಈ ಗಣಿ ಪ್ರದೇಶದಲ್ಲಿ ನಿರ್ಬಂಧಿತ ಸ್ಫೋಟಕಗಳನ್ನು ಬಳಕೆ ಮಾಡಿ ಅರೆ ತಾಂತ್ರಿಕ ಮತ್ತು ತೆರೆದ ವ್ಯವಸ್ಥೆಗಳಲ್ಲಿ ಗಣಿಗಾರಿಕೆಯನ್ನು ನಡೆಸಲಾಗುತ್ತದೆ.

ಸ್ಥಳೀಯವಾಗಿ ನಡೆಯುತ್ತಿರುವ ನಿರ್ಮಾಣ ಕಾಮಗಾರಿಗಳಿಗೆ ಕಲ್ಲುಗಳು ಮತ್ತು ಎಂ-ಸ್ಯಾಂಡ್ ಅಗತ್ಯವಿದೆ. ಕಲ್ಲು ಗಣಿಗಾರಿಕೆಯಿಂದ ಸ್ಥಳೀಯವಾಗಿರುವ ಕಲ್ಲುಗಳನ್ನು ಮತ್ತು ಎಂ-ಸ್ಯಾಂಡ್ ಅನ್ನು ಪೂರೈಸಲು ಅನುಕೂಲವಾಅದೆ.

ಈ ಪ್ರಸ್ತಾವನೆಯು ಹೊಸ ಯೋಜನೆ. ಕೇಂದ್ರ ಸರ್ಕಾರದ ಗಣಿ ಮತ್ತು ಸುರಕ್ಷತಾ ನಿರ್ದೇಶನಾಲಯವು ಜಾರಿ ಮಾಡಿರುವ ಎಲ್ಲಾ ರೀತಿಯ ಸುರಕ್ಷತಾ ಕ್ರಮಗಳನ್ನು ಅನುಸರಿಸಿಯೇ ಗಣಿಗಾರಿಕೆಯ ಯೋಜನೆಯನ್ನು ಸಿದ್ಧಪಡಿಸಲಾಗಿದೆ.

ಈ ಗಣಿ ಪ್ರದೇಶದಲ್ಲಿ 35,62,940 ಟನ್ (ತ್ಯಾಜ್ಯ ಸೇರಿ) ಪ್ರಮಾಣದ ಕಲ್ಲಿನ ಸಂಗ್ರಹವನ್ನು ಗುರುತಿಸಲಾಗಿದೆ. ಒಟ್ಟು ಉತ್ಪಾದನೆಯ ಶೇ. 98 ರಷ್ಟನ್ನು ಮಾರಾಟ ಮಾಡಲು ಸಾಧ್ಯವಿದ್ದು, ಶೇ. 2 ರಷ್ಟು ತ್ಯಾಜ್ಯವಾಗಿರುತ್ತದೆ. ಈ ಗಣಿಯ ಜೀವಿತಾವಧಿಯು 7 ವರ್ಷ ಆಗಿರುತ್ತದೆ.

ಪ್ರಸ್ತಾವಿತ ಗಣಿ ಪ್ರದೇಶದಲ್ಲಿ ಭೂ ವೈಜ್ಞಾನಿಕ ಮತ್ತು ಗಣಿಗಾರಿಕೆಯ ಮೀಸಲು ಕೆಳಗಿನಂತಿದೆ ;

| Description | Geological Reserves Tons | Mineable Reserves Tons |
|---|---|---|
| Proved | 38,14,723 | 30,49,761 |
| Probable | 6,27,150 | 5,13,179 |
| **TOTAL** | **44,41,873** | **35,62,940** |

# : ಸ್ಥಳೀಯ ಭೂ ವಿಜ್ಞಾನ:

ಪ್ರಸ್ತಾವಿತ ಗಣಿ ಪ್ರದೇಶದಲ್ಲಿ ಇರುವ ನಿಕ್ಷೇಪವನ್ನು ಹಾರ್ನ್‌ಬ್ಲೆಂಡ್ ಬಯೋಟೈಟ್ ಗ್ನೈಸಿಸ್ ಗ್ರಾನೋಡಿಯೊರೈಟ್ ಎಂದು ಹೆಸರಿಸಲಾಗಿದ್ದು, ಒರಟಾದ ಬಂಡೆಗಲ್ಲುಗಳು ಮತ್ತು ಹರಳಿನ ರೂಪದಲ್ಲಿ ಕಲ್ಲಿನ ನಿಕ್ಷೇಪಗಳನ್ನು ಕಾಣಬಹುದಾಗಿದೆ. ಈ ನಿಕ್ಷೇಪವನ್ನು ಕಟ್ಟಡದ ಕಲ್ಲಿಗಾಗಿ ಮತ್ತು ಎಂ-ಸ್ಯಾಂಡ್ ಉತ್ಪಾದನೆಗಾಗಿ, ರಸ್ತೆಗಳ ನಿರ್ಮಾಣಕ್ಕಾಗಿ, ಸ್ಥಳೀಯ ಕೈಗಾರಿಕೆಗಳಿಗಾಗಿ ಬಳಕೆ ಮಾಡಬಹುದಾಗಿದೆ.

ಪ್ರಸ್ತಾವಿತ ಕಲ್ಲು ಗಣಿಗ ಪ್ರದೇಶದಲ್ಲಿಯ ಗುರುತ್ವಾಕರ್ಷಣೆ ಶಕ್ತಿಯು 2.63 ಪ್ರಮಾಣದಲ್ಲಿ ಇರುತ್ತದೆ.

## ಗಣಿಗಾರಿಕೆ ಸ್ಥಳದ ವಿನ್ಯಾಸ :

ಪ್ರಸ್ತಾವಿತ ಗಣಿ ಪ್ರದೇಶವು ಎಲ್ಲಾ ದಿಕ್ಕುಗಳಲ್ಲೂ ಕಲ್ಲಿನ ರೇಖೆಗಳು ಮತ್ತು ಇಳಿಜಾರನ್ನು ಒಳಗೊಂಡಿದೆ. ಸಮುದ್ರಮಟ್ಟಕಿಂತ 679 ಮೀಟರ್ ಎತ್ತರದಲ್ಲಿದೆ. ಸಮುದ್ರಮಟ್ಟಕ್ಕಿಂತ ಅತ್ಯುನ್ನತ ಎತ್ತರವು 682 ಮೀಟರ್ ಮತ್ತು ಕಡಿಮೆ ಎತ್ತರವು 676 ಮೀಟರ್ ಆಗಿದೆ.

ವಜ್ರಬಂಡಿ ಗ್ರಾಮದ ಹೊರ ವಲಯದಲ್ಲಿದ್ದು, ಈ ಗ್ರಾಮವು ಕೇವಲ 1 ಕಿಲೋ ಮೀಟರ್ ಅಂತರದಲ್ಲಿದೆ.

ಗಣಿಗಾರಿಕೆಯ ಕೋರ್ ವಲಯದಲ್ಲಿ ಯಾವುದೇ ಸೂಕ್ಷ್ಮವಾದ ಪರಿಸರ ಗ್ರಾಹಕಗಳು ಅಥವಾ ಪರಿಸರ ವ್ಯವಸ್ಥೆಗಳು ಅಥವಾ ಜಲಮೂಲಗಳು ಇಲ್ಲ.

ಪ್ರಸ್ತಾವಿತ ಕಲ್ಲು ಗಣಿಗಾರಿಕೆ ಪ್ರದೇಶದಿಂದ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಸೂಕ್ಷ್ಮವಾದ ಪರಿಸರ ಗ್ರಾಹಕಗಳು ಇಲ್ಲ. ಸಮೀಪದಲ್ಲಿ ಯಾವುದೇ ಬೃಹತ್ ಕೈಗಾರಿಕಾ ಘಟಕಗಳು ಇಲ್ಲ. ಕೆಲ ಕಲ್ಲು ಗಣಿಗಾರಿಕೆ ಮತ್ತು ಎಂ–ಸ್ಯಾಂಡ್ ಉತ್ಪಾದನಾ ಘಟಕಗಳು ಇವೆ.

ಪ್ರಸ್ತಾವಿತ ಗಣಿ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳು ನಡೆಯುವುದಿಲ್ಲ.

# : ಪ್ರಸ್ತಾವಿತ ಗಣಿಗಾರಿಕೆ ಯೋಜನೆ :

ಪ್ರಸ್ತಾವಿತ ಪ್ರದೇಶದಲ್ಲಿ ತೆರೆದ (ಓಫಪನ್‌ಕಾಸ್ಟ್) ಮತ್ತು ಸೆಮಿ ಮೆಕನೈಸ್ಡ್ ವ್ಯವಸ್ಥೆಯಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆ ನಡೆಸಲಾಗುತ್ತದೆ.

ಗಣಿಗಾರಿಕೆಯ ವಿನ್ಯಾಸ, ಗಣಮಟ್ಟದಲ್ಲಿಯ ವ್ಯತ್ಯಾಸ, ತಾಂತ್ರಿಕ ವ್ಯವಸ್ಥೆಯನ್ನು ಒಳಗೊಂಡು 3 ಮೀಟರ್ ಎತ್ತರಕ್ಕೆ ಪೂರಕ ಇಳಿಜಾರಿನ ಬೆಂಚ್‌ಗಳನ್ನು ನಿರ್ಮಾಣ ಮಾಡಿ ಮಧ್ಯಮ ಪ್ರಮಾಣದ ಗಣಿಗಾರಿಕೆಗೆ ಪೂರಕವಾದ ಸಣ್ಣ ವ್ಯಾಸದ ಜ್ಯಾಕ್ ಡ್ರಿಲ್ಲರ್‌ಗಳ ಮೂಲಕ ನಿರ್ಬಂಧಿತ ಸ್ಫೋಟಕಗಳನ್ನು ಬಳಕೆ ಮಾಡಿ ಹ್ಯಾಮರ್ ಡ್ರಿಲ್ಲರ್‌ಗಳನ್ನು ಬಳಕೆ ಮಾಡಿ ಕಲ್ಲುಗಳನ್ನು ಸ್ಫೋಟಿಸಲಾಗುತ್ತದೆ.

ಗಣಿ ಸುರಕ್ಷಾ ನಿರ್ದೇಶನಾಲಯವು ಜಾರಿ ಮಾಡಿರುವ ಸುರಕ್ಷಾ ಕ್ರಮಗಳ ಪ್ರಕಾರವೇ ಬೆಂಚುಗಳ ಎತ್ತರ, ಅಗಲ ಮತ್ತು ಇಳಿಜಾರನ್ನು ನಿರ್ವಹಿಸಲಾಗುತ್ತದೆ.

ಎಕ್ಸವೇಟರುಗಳು/ಲೋಡರುಗಳು ಮತ್ತು ಟಿಪ್ಪರ್‌ಗಳು–ಟ್ರ್ಯಾಕ್ಟರ್‌ಗಳನ್ನು, ಯಂತ್ರಗಳನ್ನು ಬಳಕೆ ಮಾಡಿ ಗಣಿ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲಾಗುತ್ತದೆ.

ಗಣಿ ಸುರಕ್ಷತಾ ನಿರ್ದೇಶನಾಲಯದಿಂದ ಪರವಾನಿಗೆ ಪಡೆದ, ಅರ್ಹ ವ್ಯಕ್ತಿಗಳ ಸಮ್ಮುಖದಲ್ಲಿಯೇ ಗಣಿಗಾರಿಕೆ ಚಟವಟಿಕೆಗಳನ್ನು ನಡೆಸಲಾಗುತ್ತದೆ. ಮತ್ತು ಸ್ಫೋಟಕಗಳನ್ನು ನಡೆಸಲಾಗುತ್ತದೆ.

ನಿರ್ಬಂಧಿತ ಸ್ಫೋಟಕಗಳನ್ನು ಬಳಕೆ ಮಾಡುವ ಮೂಲಕ ಸ್ಫೋಟಿಸಲಾಗುತ್ತದೆ.

ಪ್ರಸ್ತಾಪಿತ ಗಣಿ ಪ್ರದೇಶದಲ್ಲಿ ಶಬ್ದದ ಮಟ್ಟವು 90 ಡೆಸಿಬಲ್ ಪ್ರಮಾಣಕ್ಕಿಂತ ಕಡಿಮೆ ಇರುತ್ತದೆ. 32 ಮಿಮೀ ವ್ಯಾಸದ 5 ಇಂಚು ಆಳದ ರಂಧ್ರಗಳನ್ನು ಕೊರೆದು 187.5 ಗ್ರಾಂ ಪ್ರಮಾಣದ ಸ್ಫೋಟಕಗಳನ್ನು ಭರ್ತಿ ಮಾಡಿ ವೈಜ್ಞಾನಿಕವಾಗಿ ಸ್ಫೋಟಕಗಳನ್ನು ನಡೆಸಲಾಗುತ್ತದೆ.

ಗಣಿ ಉತ್ಪನ್ನವನ್ನು 10 ಟನ್ ಸಾಮರ್ಥ್ಯದ ಟಿಪ್ಪರ್ / ಲೋಡರ್‌ಗಳಲ್ಲಿ ಯಂತ್ರಗಳ ಮೂಲಕ ತುಂಬಿ 2 ಕಿಲೋ ಮೀಟರ್ ದೂರದಲ್ಲಿ ಇರುವ ಕ್ರಷಿಂಗ್ ಮತ್ತು ಸ್ಕ್ರೀನಿಂಗ್‌ನ ಸ್ಥಳಕ್ಕೆ ಸಾಗಾಣಿಕೆ ಸುರಕ್ಷತಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸಾಗಾಣಿಕೆ ಮಾಡಲಾಗುತ್ತದೆ.

ಗಣಿ ತ್ಯಾಜ್ಯವನ್ನು ಸಮರ್ಥವಾಗಿ ನಿರ್ವಹಣೆ ಮಾಡಲಾಗುತ್ತದೆ. ಅಲ್ಲದೇ, 1:6 ಅನುಪಾತದಲ್ಲಿ ಗಣಿ ಪ್ರದೇಶದಲ್ಲಿಯ ಆಂತರಿಕ ರಸ್ತೆ ನಿರ್ಮಾಣಕ್ಕೆ ಬಳಕೆ ಮಾಡಲಾಗುತ್ತದೆ.

ಗಣಿ ಚಟುವಟಿಕೆಗಳು ನಡೆಯುವ ಸ್ಥಳದಲ್ಲಿ ಸುರಕ್ಷತೆಗೆ ಅನುಗುಣವಾಗಿ ತ್ಯಾಜ್ಯವನ್ನು ಬಳಕೆ ಮಡಿಕೊಂಡ ತಡೆಗೋಡೆಗಳು, ಇಳಿಜಾರುಗಳು, ರಸ್ತೆಗಳನ್ನು ನಿರ್ವಹಿಸಲಾಗುತ್ತದೆ.

ಪ್ರಸ್ತಾವಿತ ಗಣಿ ಪ್ರದೇಶದಲ್ಲಿ ವರ್ಷದಲ್ಲಿ 300 ದಿನಗಳ ಕಾರ್ಯ ನಿರ್ವಹಿಸಿ ಪ್ರತಿ ದಿನಕ್ಕೆ 1,707 ಟನ್ ಪ್ರಮಾಣದ ಉತ್ಪನ್ನದ ಗುರಿಹೊಂದಲಾಗಿದೆ. ವಾರ್ಷಿಕ ತ್ಯಾಜ್ಯ ಸೇರಿ ಒಟ್ಟು 5,12,153 ಟನ್ ಪ್ರಮಾಣದ ಉತ್ಪಾದನೆಯ ಗುರಿ ಇದೆ.

ಒಟ್ಟು ಉತ್ಪಾದನೆಯಲ್ಲಿ ಸಿಗುವ 51,215 ಟನ್ ಪ್ರಮಾಣದ ತ್ಯಾಜ್ಯವನ್ನು ಸಂಪರ್ಕ ರಸ್ತೆಗಳ ಸಾಮರ್ಥ್ಯ ಹೆಚ್ಚಳ ಮತ್ತು ನಿರ್ವಹಣೆಗಾಗಿ ಬಳಕೆ ಮಾಡಲಾಗುತ್ತದೆ.

# : ವಾರ್ಷಿಕವಾರು ಉತ್ಪಾದನೆಯ ಯೋಜನೆ :

- The details of year wise excavation during the plan period, are as under:

| Year | Total ROM Production | | Saleable Mineral @ 98% (Tons) | Waste @ 2% (Tons) |
|---|---|---|---|---|
| | CuM | Tons | | |
| 1st Year | 1,94,735 | 5,12,153 | 5,01,910 | 10,243 |
| 2nd Year | 1,94,735 | 5,12,153 | 5,01,910 | 10,243 |
| 3rd Year | 1,94,735 | 5,12,153 | 5,01,910 | 10,243 |
| 4th Year | 1,94,735 | 5,12,153 | 5,01,910 | 10,243 |
| 5th Year | 1,94,735 | 5,12,153 | 5,01,910 | 10,243 |
| Total | **9,73,675** | **25,60,765** | **25,09,550** | **51,215** |
| Average | 1,69,456 | 5,01,910 | 5,12,153 | 8,913 |

# : ಗಣಿಗಾರಿಕೆ ಪ್ರದೇಶದ ಪರಿಸರ ಗುಣಮಟ್ಟ :

## 1. ಗಾಳಿ :

ಪ್ರಸ್ತಾವಿತ ಕಲ್ಲು ಗಣಿಗಾರಿಕೆಯಿಂದ ಯಾವುದೇ ಅನಿಲ ಹೊರಬರುವುದಿಲ್ಲ. ಪರಿಸರ ಅಧ್ಯಯನದ ಅವಧಿಯಲ್ಲಿ ಪ್ರಧಾನವಾದ ಗಾಳಿ ಬೀಸುವ ದಿಕ್ಕುಗಳು ENE (11.85%) ಮತ್ತು SE (9.35%), E (18.56%), ESE (15.18%) ಆಗಿರುತ್ತದೆ. ಸರಾಸರಿ ಗಾಳಿಯ ವೇಗವು 2.76 ಮೀಟರ್/ಪ್ರತಿ ಸೆಕೆಂಡಿಗೆ.

ಕೊಪ್ಪಳ ಜಿಲ್ಲೆಯಲ್ಲಿ ವಾತಾವರಣದ ಸ್ಥಿರತೆಯು ಹಗಲಿನಲ್ಲಿ ಮಧ್ಯಮ ಅಸ್ಥಿರತೆಯಿಂದ ಸ್ವಲ್ಪ ಅಸ್ಥಿರವಾಗಿರುತ್ತದೆ. ಈ ಪ್ರದೇಶವು ಗ್ರಾಮೀಣ ಮತ್ತು ನಗರ ಪ್ರದೇಶದ ಮಿಶ್ರ ಪರಿಸರವನ್ನು ಹೊಂದಿದೆ.

ಗಣಿಗಾರಿಕೆ ಪ್ರದೇಶದಲ್ಲಿಯ ಮಾಲಿನ್ಯವು ರಾಷ್ಟ್ರೀಯ ವಾಯು ಗುಣಮಟ್ಟದ ಮಾನದಂಡಗಳಿಗಿಂತಲೂ ತೀರ ಕಡಿಮೆ ಪ್ರಮಾಣದಲ್ಲಿ ಇದೆ. PM10, PM2.5, SO2 ಮತ್ತು NOx ಅನುಕ್ರಮವಾಗಿ 100, 60, 80 ಮತ್ತು 80 μg/m3 ಆಗಿದೆ.

ಗಣಿಗಾರಿಕೆ ಸಂದರ್ಭದಲ್ಲಿ ತಂತಿ ಗರಗಸದಿಂದ ಬ್ಲಾಕ್‌ಗಳನ್ನು ಕತ್ತರಿಸುವುದು ಮತ್ತು ಬ್ಲಾಕ್‌ಗಳನ್ನು ಲೋಡಿಂಗ್/ಅನ್‌ಲೋಡಿಂಗ್ ಮಾಡುವಾಗಿನ ಸಾರಿಗೆ ಚಟುವಟಿಕೆಗಳಿಂದ ಅಲ್ಪ ಪ್ರಮಾಣದಲ್ಲಿ ಧೂಳಿನ ಕಣಗಳು ಗಾಳಿಯಲ್ಲಿ ಸೇರುತ್ತವೆ.

## 2. ಶಬ್ಧ :

Ld, Ln & Ldn values were typical of rural background.

| | Lease (Core) dB(A) | Buffer (Min.) dB(A) | Buffer (Max.) dB(A) |
|---|---|---|---|
| Ld | 38 | 40 | 52 |
| Ln | 36 | 36 | 48 |
| Ldn | 37 | 39 | 50 |

ಗಣಿಗಾರಿಕೆಯಲ್ಲಿ ಡ್ರಿಲ್ಲಿಂಗ್ ಮತ್ತು ತಂತಿಯ ಗರಗಸದ ಬಳಕೆಯಿಂದ ಉಂಟಾಗುವ ಶಬದ್ಧವನ್ನು ಆಧರಿಸಿ ಕೋಷ್ಠಕವನ್ನು ಸಿದ್ಧಪಡಿಸಲಾಗಿದೆ.

## 3. ನೀರಿನ ಗುಣಮಟ್ಟ :

ಪ್ರಸ್ತಾವಿತ ಗಣಿಗಾರಿಕೆ ಪ್ರದೇಶದ ಮೇಲ್ಮೈನಲ್ಲಿ ನೀರಿನ ಮೂಲಗಳಿಲ್ಲ.

ಕೊಪ್ಪಳ ಜಿಲ್ಲೆಯಲ್ಲಿ ವಾರ್ಷಿಕ ಸರಾಸರಿ 572 ಮಿ.ಮೀ ಪ್ರಮಾಣದಲ್ಲಿ ಮಳೆ ಸುರಿಯಲಿದೆ. ಭಾರತ ಸರ್ಕಾರದ ಅಂತರ್ಜಲಮಂಡಳಿ ಡಿಸೆಂಬರ್ 2008 ರಲ್ಲಿ ನಡೆಸಿರುವ ಅಧ್ಯಯನದ ಪ್ರಕಾರ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನಲ್ಲಿ ಮುಂಗಾರು ಪೂರ್ವ ಮತ್ತು ಮುಂಗಾರಿನ ನಂತರದಲ್ಲಿ ಅಂತರ್ಜಲಮಟ್ಟವು ಅಂದಾಜು 10–20ಮೀ ಬಿಜಿಎಲ್ ಆಗಿರುತ್ತದೆ.

ಸ್ಥಳೀಯರ ಪ್ರಕಾರ, ಮುಂಗಾರು ಪೂರ್ವದಲ್ಲಿ ಅಂತರ್ಜಲಮಟ್ಟವು ಸುಮಾರು 35–40ಮೀ ಬಿಜಿಎಲ್ ಮತ್ತು ಮುಂಗಾರಿನ ನಂತರ 30–35ಮೀ ಬಿಜಿಎಲ್ ಆಗಿರುತ್ತದೆ.

ಪ್ರಸ್ತಾವಿತ ಗಣಿ ಗುತ್ತಿಗೆ ಪ್ರದೇಶದಲ್ಲಿ ಲಭ್ಯವಿರುವ ಅಂತರ್ಜಲದ ಗುಣಮಟ್ಟವು ಕುಡಿಯುವ ನೀರಿನ ಬಳಕೆಗೆ ಅನುಮತಿಸುವ ಮಿತಿಯಲ್ಲಿದೆ.

ಮಳೆಗಾಲದಲ್ಲಿ ಗಣಿಗಾರಿಕೆ ಪ್ರದೇಶದ ಸುತ್ತಲೂ ಹರಿಯುವ ನೀರನ್ನು ಅಂತರ್ಜಲ ಹೆಚ್ಚಿಸಲು ಸಂಗ್ರಹ ಮಾಡಬಹುದು. ಅಲ್ಲದೇ ನೀರು ಆವಿಯಾಗುತ್ತದೆ.

## ಗಣಿಯ ಘನ ತ್ಯಾಜ್ಯ ನಿರ್ವಹಣೆ :

ಕಲ್ಲು ಗಣಿಗಾರಿಕೆಯಿಂದಾಗಿ ವಾರ್ಷಿಕ 51,215 ಟನ್ ಪ್ರಮಾಣದ ಘನ ತ್ಯಾಜ್ಯ ಉತ್ಪನ್ನವನ್ನು ಅಂದಾಜಿಸಲಾಗಿದೆ. ಈ ತ್ಯಾಜ್ಯವನ್ನು ಐಬಿಎಂ ನಿಯಮಗಳ ಪ್ರಕಾರ ಸಂಗ್ರಹ ಮಾಡಿ ಎಂ–ಸ್ಯಾಂಡ್ ಉತ್ಪಾದನೆ, ಸಂಪರ್ಕ ರಸ್ತೆಗಳ ನಿರ್ವಹಣೆಗೆ ಬಳಕೆ ಮಾಡಲಗುತ್ತದೆ.

# : ಗಣಿಗಾರಿಕೆಯ ಪರಿಣಾಮಗಳು :

## ಭೂಮಿ:

ಪ್ರಸ್ತಾವಿತ ಕಲ್ಲು ಗಣಿ ಗುತ್ತಿಗೆ ಪ್ರದೇಶದಲ್ಲಿ ಹೆಚ್ಚಿನ ಮಣ್ಣು ಇಲ್ಲ. ಕೃಷಿ ಚಟುವಟಿಕೆಗಳು ನಡೆಯುತ್ತಿಲ್ಲ. ಕ್ವಾರಿ ಹೊಂಡ ಅಥವಾ ಡಂಪ್‌ಗಳು ಇಲ್ಲ. ಗಣಿಗಾರಿಕೆಯ ಸಂದರ್ಭದಲ್ಲಿ ಒಂದು ಕಂದಕವನ್ನು ರಚನೆ ಮಾಡಲಾಗುತ್ತದೆ. ಭೂಮಿಗೆ ಧಕ್ಕೆಯಾಗುವ/ಹಾನಿಯಾಗುವ ಚಟುವಟಿಕೆಗಳನ್ನು ನಡೆಸುವುದಿಲ್ಲ.

ಗಣಿ ಪ್ರದೇಶದಲ್ಲಿಯ ಮೇಲ್ಮೈ ಪ್ರದೇಶವನ್ನು ಪ್ರಸ್ತುತ ಇರುವ ರೀತಿಯಲ್ಲಿ ನಿರ್ವಹಿಸಲಾಗುತ್ತದೆ. ಗಣಿ ಪ್ರದೇಶದಲ್ಲಿಯ ಹಿಂಭಾಗವನ್ನು ಮುಚ್ಚುವಿಕೆ ಅಥವಾ ಸುಧಾರಣೆ ಮಾಡುವ ಪ್ರಸ್ತಾವನೆ ಇಲ್ಲ. ಮಳೆ ನೀರನ್ನು ಗಣಿಯ ಹೊರ ಪ್ರದೇಶದಲ್ಲಿ ಸಂಗ್ರಹ ಮಾಡಿ, ನಿರ್ವಹಣೆ ಮಾಡಿ ಅಂಜರ್ತಲಮಟ್ಟ ಸುಧಾರಣೆಗೆ ಮತ್ತು ಸಸಿಗಳನ್ನು ನಿರ್ವಹಿಸಲು ಬಳಕೆ ಮಾಡಲಾಗುತ್ತದೆ. ಗಣಿಗಾರಿಕೆ ಸ್ಥಗಿತಗೊಂಡಲ್ಲಿ ಉದ್ದೇಶಿತ ಪ್ರದೇಶದಲ್ಲಿ ಮೀನುಗಾರಿಕೆ ನಡೆಸಬಹುದಾಗಿದೆ.

ಗಣಿಗಾರಿಕೆಯ ಗುತ್ತಿಗೆ ಅವಧಿಯಲ್ಲಿ ಅಂದಾಜು ವಾರ್ಷಿಕ 51,215 ಟನ್ ಪ್ರಮಾಣ ತ್ಯಾಜ್ಯ ಉತ್ಪಾದನೆಯ ನಿರೀಕ್ಷೆಯಿದೆ. ಈ ತ್ಯಾಜ್ಯವನ್ನು ಎಂ–ಸ್ಯಾಂಡ್ ಉತ್ಪಾದನೆ, ರಸ್ತೆಗಳ ನಿರ್ವಹಣೆ ಸೇರಿ ವಿವಿಧ ಚಟುವಟಿಕೆಗಳಿಗೆ ಬಳಕೆ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ.

ಗಣಿಗಾರಿಕೆಯ ಈ ತ್ಯಾಜ್ಯವು ಪರಿಸರದ ಮೇಲೆ ಯಾವುದೇ ರೀತಿಯಲ್ಲಿ ದುಷ್ಪರಿಣಾಮ ಬೀರುವುದಿಲ್ಲ.

ಗಣಿ ಗುತ್ತಿಗೆ ಪ್ರದೇಶದಲ್ಲಿಯ ಭೂ ಬಳಕೆಯ ಸಮಗ್ರ ವಿವರಗಳು:
**The Land use details, in lease area, are as under:**

| Sl. No. | Item | Existing Landuse (Acres-Guntas) | Landuse at the end of plan period (Acres-Guntas) |
|---|---|---|---|
| 1. | Mining area | - | 9-06 |
| 2. | Overburden / dump | -- | 0-10 |
| 3. | Mineral Storage | -- | 0-10 |
| 4. | Infrastructure, office | -- | 0-02 |
| 5. | Roads | - | 0-02 |
| 6. | Safety/Green Belt | 2-10 | 2-10 |
| 7. | Unused / virgin area | 9-30 | -- |
| **Total** | | **12-00** | **12-00** |

## ಗಾಳಿ:

ಗಣಿ ಗುತ್ತಿಗೆ ಪ್ರದೇಶದಲ್ಲಿ ಗಣಿಗಾರಿಕೆ ಚಟುವಟಿಕೆಗಳಿಂದ ಪರಿಸರ ಮತ್ತು ಸುತ್ತಲಿನ ವಾಯು ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುವುದಿಲ್ಲ.

*ಡ್ರಿಲ್ಲಿಂಗ್, ವಾಹನಗಳ ಸಂಚಾರದಲ್ಲಿ ಗುತ್ತಿಗೆ ಪ್ರದೇಶದಲ್ಲಿ ಅಲ್ಪ ಪ್ರಮಾಣದ ಧೂಳು ಕಾಣಿಸಲಿದ್ದು ಕಾಲಕಾಲಕ್ಕೆ ಪರಿಸರ ನಿರ್ವಹಣೆಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. (ಗಮನಿಸಿ).*

## ನೀರು:

ಗಣಿಗಾರಿಕೆ ಪ್ರದೇಶದಲ್ಲಿ ಒಳಚರಂಡಿ ಇಲ್ಲದ ಕಾರಣ ಜಲಚರಗಳ ಮೇಲೆ ಯಾವುದೇ ದುಷ್ಪರಿಣಾಮ ಉಂಟಾಗುವುದಿಲ್ಲ. ಗಣಿ ಪ್ರದೇಶದಲ್ಲಿ ಅಂತರ್ಜಲವನ್ನು ನಿಬಂಧಿಸುವ ಚಟುವಟಿಕೆಗಳು ನಡೆಯುವುದಿಲ್ಲ. ಗಣಿಗಾರಿಕೆಗಾಗಿ ಬಳಕೆ ಮಾಡುವ ನೀರು ಕೃಷಿಗೆ ಯೋಗ್ಯವಾಗಿದ್ದು, ಫ್ಲೋರೈಡ್ ಅಂಶವನ್ನು ನಿರಂತರವಾಗಿ ನಿರ್ವಹಿಸಲಾಗುತ್ತದೆ.

## ಶಬ್ಧ :

ಗಣಿಗಾರಿಕೆಯ ಸಂದರ್ಭದಲ್ಲಿ ಡ್ರಿಲ್ಲಿಂಗ್ ಮತ್ತು ಕಟಿಂಗ್ ಸಂದರ್ಭದಲ್ಲಿ 75-80 ಡೆಸಿವಬಲ್ (ಎ) ಪ್ರಮಾಣದಲ್ಲಿ ಶಬ್ಧ ಕೇಳಬರುತ್ತಿರುತ್ತದೆ. ಡ್ರಿಲ್ಲಿಂಗ್ ಸಂದರ್ಭದಲ್ಲಿ ಹಲವೆಡೆ ಕೆಲವೊಮ್ಮೆ ಗಣಿ ಪ್ರದೇಶದ ಗೋಡೆಗಳಲ್ಲಿ ಕಂಪನಗಳು ಉಂಟಾಗಬಹುದು. ಆದರೆ ಈ ಕಂಪನಗಳು ಯಾವುದೇ ದುಷ್ಪರಿಣಾಮ ಬೀರುವುದಿಲ್ಲ.

## ಜೈವಿಕ ಪರಿಸರ :

ಪ್ರಸ್ತಾವಿತ ಗಣಿಗಾರಿಕೆ ಪ್ರದೇಶದ 10 ಕಿಮೀ ಸುತ್ತಲಿನ ಪ್ರದೇಶದಲ್ಲಿ ಯಾವುದೇ ಸೂಕ್ಷ್ಮ ಪ್ರಾಣಿ, ಸಸ್ಯ ಅಥವಾ ಅಳಿವಿನ ಅಂಚಿನಲ್ಲಿರುವ ಪ್ರಬೇಧಗಳ ವಾಸವಿಲ್ಲ. ಗಣಿಗಾರಿಕೆ ಪ್ರದೇಶವು ಮೀಸಲು ಅರಣ್ಯೇತರ ಪ್ರದೇಶವಾಗಿದೆ. ಯೋಜನೆಯ ಪ್ರತಿಪಾದಕರು ಅರಣ್ಯ ಇಲಾಖೆಯ ನೆರವಿನಲ್ಲಿ ವೈಜ್ಞಾನಿಕವಾಗಿ ಸ್ಥಳೀಯವಾಗಿ ಬೆಳೆಯುವ ಸಸಿಗಳನ್ನು ನೆಟ್ಟು ಬೆಳೆಸಲು ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸಿದ್ದಾರೆ.

## ಸಾಮಾಜಿಕ, ಆರ್ಥಿಕ ಮತ್ತು ಆರೋಗ್ಯ:

ಉದ್ದೇಶಿತ ಪ್ರದೇಶವು ಯೋಜನೆಯ ಪ್ರತಿಪಾದಕರಾದ ಮೆ. ಶ್ರೀ ಸಾಯಿರಾಮ ಸ್ಟೋನ್ ಕ್ರಷರ್ಸ್ ಅವರಿಗೆ ಅಧಿಸೂಚಿಸಲ್ಪಟ್ಟಿದೆ. ಈ ಯೋಜನೆ ಪ್ರಾರಂಭ ಆಗುವುದರಿಂದ
ಎ). ಗಣಿ ಚಟುವಟಿಕೆಗಳು ಮತ್ತು ಗಣಿಗಾರಿಕೆಗೆ ಪೂರಕವಾದ ಲೋಡಿಂಗ್ / ಅನ್‌ಲೋಡಿಮಗ್, ಎಂ-ಸ್ಯಾಂಡ್ ಉತ್ಪಾದನೆ, ತ್ಯಾಜ್ಯ ನಿರ್ವಹಣೆ, ಡ್ರಿಲ್ಲಿಂಗ್ ಸೇರಿ ವಿವಿಧ ವಿಭಾಗಗಳಲ್ಲಿ ಸ್ಥಳೀಯ ಮತ್ತು ಅರ್ಹರಿಗೆ ಉದ್ಯೋಗವಕಾಶಗಳು ಸಿಗಲಿವೆ.

ಬಿ). ಮಳೆ ನೀರು ಸಂಗ್ರಹಣೆ ಮತ್ತು ನಿರ್ವಹಣೆ, ನೈರ್ಮಲ್ಯ ಮತ್ತು ಆರೋಗ್ಯ ಸುಧಾರಣೆ ಸೇರಿ ಇನ್ನಿತರೆ ಚಟುವಟಿಕೆಗಳ ನಿರ್ವಹಣೆಗೆ ಸ್ಥಳೀಯರಿಗೆ ಅಗತ್ಯ ತರಬೇತಿ.

ಸಿ). ಗಣಿಗಾರಿಕೆ ಚಟುವಟಿಕೆಗಳಲ್ಲಿ ಸ್ಥಳೀಯ ಅರ್ಹರಿಗೆ ಅವಕಾಶ. ಅಲ್ಲದೇ, ಅನೇಕರಿಗೆ ಪೂರ್ಣಕಾಲಿಕ / ಅರೆಕಾಲಿಕ ಉದ್ಯೋಗಗಳ ಅವಕಾಶ. ಹಸಿರು ವಲಯ ನಿರ್ಮಾಣ ಮತ್ತು ನಿರ್ವಹಣೆಗೆ ಪೂರಕವಾಗಿರುತ್ತದೆ.

**Monitoring schedule:**

| Env. segment | Parameter | Frequency |
|---|---|---|
| Water quality | IS 10500 | Quarterly |
| G.W. table | Fluctuation in monsoon & post monsoon period | May & October |
| AAQ | Particulate matter PM10 & PM2.5 | during drilling, blasting – Half Yearly |
| Noise | Equi. noise levels | during drilling, blasting – Half Yearly |

| | | |
|---|---|---|
| Health | Pulmonary function, eye sight, audiometry, B.P., etc. | Annual record |
| Plantation | Survival | annual survival rate |
| Data analysis | Efficiency of mitigation measures | Half-Yearly |

# : ಸಸಿ ನೆಡುವಿಕೆ: (ನೆಡುತೋಪು)

ಪ್ರಸ್ತಾವಿತ ಕಲ್ಲು ಕ್ವಾರಿ ಪ್ರದೇಶದ ಬಫರ್ ವಲಯದ 7.5 ಮೀಟರ್ ಅಗಲದಲ್ಲಿ ಯಾವುದೇ ರೀತಿಯ ಸಸಿಗಳನ್ನು ನಡೆಲು / ನಿರ್ವಹಿಸಲು ಬರುವುದಿಲ್ಲ.

ಗಣಿಗಾರಿಕೆ ನಡೆಸುವ ಸಂಪರ್ಕ ರಸ್ತೆಯ ಇಕ್ಕೆಲಗಳಲ್ಲಿ ಮತ್ತು ಸಮೀಪದ ಸರ್ಕಾರಿ ಭೂಮಿಯಲ್ಲಿ ಅರಣ್ಯ ಇಲಾಖೆ ಶಿಫಾರಸ್ಸು ಮಾಡಿರುವ ವೈಜ್ಞಾನಿಕ ಮಾನದಂಡಗಳ ಪ್ರಕಾರ ಕಂದಕಗಳನ್ನು ನಿರ್ಮಿಸಿ ಸ್ಥಳೀಯ 600 ಜಾತಿಯ ಸಸಿಗಳನ್ನು ನೆಟ್ಟು ಬೆಳೆಸಿ ಹಸಿರು ವಲಯವನ್ನು ನಿರ್ಮಾಣ ಮಾಡಿ ನಿರ್ವಹಿಸಲಾಗುತ್ತದೆ.

ಸಸಿಗಳನ್ನು ನೆಡುವ ಕಂದಕಗಳಿಗೆ ಗುತ್ತಿಗೆ ಪ್ರದೇಶದ ಮೇಲ್ಮೈ ಮಣ್ಣನ್ನು ಭರ್ತಿ ಮಾಡಲಾಗುತ್ತದೆ. ಅಗತ್ಯಕ್ಕೆ ತಕ್ಕ ಪ್ರಮಾಣದಲ್ಲಿ ತ್ಯಾಜ್ಯ ಮತ್ತು ಕಸವನ್ನು ಭರ್ತಿ ಮಾಡಲಾಗುತ್ತದೆ. ನೀರಿನ ಲಭ್ಯತೆ ಮತ್ತು ಮಣ್ಣಿನ ಸಾರಾಂಶವನ್ನು ಅವಲಂಭಿಸಿ ಸ್ಥಳೀಯ ಜಾತಿಯ ಸಸಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

# : ಉದ್ಯೋಗ, ಆರೋಗ್ಯ ಮತ್ತು ಸುರಕ್ಷತಾ ಕ್ರಮಗಳು :

ಗಣಿಗಾರಿಕೆಯಲ್ಲಿ ತೊಡಗಿಕೊಂಡ ಕಾರ್ಮಿಕರಿಗೆ ವೈಯಕ್ತಿಕ ಸುರಕ್ಷತಾ ಕಿಟ್ (PPE) ಗಳನ್ನು ಪೂರೈಕೆ ಮಾಡಿ ಕಡ್ಡಾಯವಾಗಿ ಸುರಕ್ಷತಾ ಉಪಕರಣಗಳನ್ನು ಬಳಸುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಪೂರಕ ಸುರಕ್ಷತಾ ಸಾಮಗ್ರಿಗಳಾದ ಬೂಟು, ಮುಖವಾಡಗಳು, ಹೆಲ್ಮೆಟ್‌ಗಳು ಸೇರಿದಂತೆ ಎಲ್ಲಾ ಸುರಕ್ಷತಾ ಉಪಕರಣಗಳನ್ನು ತಪ್ಪದೇ ಪೂರೈಸಲಾಗುತ್ತದೆ.

ಶ್ರವಣ ಮತ್ತು ಶ್ವಾಸಕೋಶದ ಆರೋಗ್ಯ ನಿರ್ವಹಣೆಗಾಗಿ ವರ್ಷಕ್ಕೊಮ್ಮೆ ತಜ್ಞ ವೈದ್ಯರಿಂದ ವೈದ್ಯಕೀಯ ತಪಾಸಣೆ ನಡೆಸಿ, ಪ್ರಮಾಣಪತ್ರವನ್ನು ಪಡೆಯಲಾಗುತ್ತದೆ.

ಕಾರ್ಮಿಕರು ಕೆಲಸ ಮಾಡುವ ಸ್ಥಳದಲ್ಲಿ ವಿಶ್ರಾಂತಿ ಕೋಣೆ, ಶುದ್ಧವಾದ ಕುಡಿಯುವ ನೀರಿನ ಪೂರೈಕೆ, ಪ್ರಥಮ ಚಿಕಿತ್ಸೆ ಸೌಲಭ್ಯ, ಊಟ – ಉಪಹಾರದ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ.

# ಕಾರ್ಪೋರೇಟ್ ವಲಯದ ಸಾಮಾಜಿಕ ಜವಾಬ್ದಾರಿ (ಸಿಎಸ್ಆರ್)

1. ವಜ್ರಬಂಡಿ ಗ್ರಾಮಕ್ಕೆ ರೂಪಾಯಿ 3.50 ಲಕ್ಷ ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಒದಗಿಸುವುದು.

2. ಕಾಲಕಾಲಕ್ಕೆ ಅಕ್ಷರ, ಆರೋಗ್ಯ ಮತ್ತು ನೈರ್ಮಲ್ಯ ಜಾಗೃತಿ ಶಿಬಿರಗಳನ್ನು ನಡೆಸಲಾಗುವುದು.

೩. ಸಮೀಪದ ಹಳ್ಳಿಗಳಲ್ಲಿ ವಾರ್ಷಿಕ ಆರೋಗ್ಯ ಶಿಬಿರಗಳನ್ನು ಆಯೋಜಿಸಿ ಜನರ ಉಚಿತ ಆರೋಗ್ಯ ತಪಾಸಣೆ ನಡೆಸುವುದು.

## : ಸಿಎಸ್‌ಆರ್ ನಿಧಿ:

# CSR – funds

| Activity | Anticipated funds |
|---|---|
| Supply of Drinking Water unit to Vajrabandi Village | Rs. 3,50,000 (One time investment) |
| Annual Health camps in the nearby villages | Rs. 1,00,000/- per camp per annum |

N.B. Costs are indicative

# : ಯೋಜನೆಯಿಂದ ಉಂಟಾಗುವ ಆರ್ಥಿಕ ಲಾಭಗಳು :

ಮೆ. ಸಾಯಿರಾಮ ಸ್ಟೋನ್ ಕ್ರಷರ್ಸ್ ಕಂಪನಿಯು ಉದ್ದೇಶಿತ ಸ್ಥಳದಲ್ಲಿ ಗಣಿಗಾರಿಕೆ ನಡೆಸುವುದರಿಂದ ವಜ್ರಬಂಡಿ ಗ್ರಾಮ ಸೇರಿ ಸುತ್ತಲಿನ ಗ್ರಾಮಗಳಲ್ಲಿ ನೇರ ಮತ್ತು ಆಧಾರಿತ ಉದ್ಯೋಗಗಳು ಸೃಷ್ಟಿ ಆಗಲಿವೆ.

ವಜ್ರಬಂಡಿ ಪ್ರದೇಶಲ್ಲಿ ಸಿಗುವ ಕಲ್ಲು ಮತ್ತು ಎಂ–ಸ್ಯಾಂಡ್‌ನಿಂದ ಬೆಂಗಳೂರಿನಲ್ಲಿ ನಡೆಯುತ್ತಿರುವ ನಿರ್ಮಾಣ ಕಾಮಗಾರಿಗೆ ಅಗತ್ಯವಿರುವ ಕಚ್ಚಾ ವಸ್ತುವಿನ ಪೂರೈಕೆ ಆಗಲಿದೆ.

ಪ್ರಸ್ತಾವಿತ ಪ್ರದೇಶವು ಅರಣ್ಯೇತರ ಭೂಮಿ. ಇಲ್ಲಿ ದೊಡ್ಡದಾದ ಮರ, ಪೊದೆಗಳು ಇಲ್ಲ. ಸಂಗ್ರಹವಾಗುವ ಮಳೆ ನೀರನ್ನು ಧೂಳು ನಿಯಂತ್ರಣಕ್ಕೆ ಮತ್ತು ಹಸಿರು ವಲಯ ನಿರ್ಮಾಣಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತದೆ. ಕಾರಣ ಇಲ್ಲಿ ಗಣಿಗಾರಿಕೆ ನಡೆಸುವುದರಿಂದ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಉಂಟಾಗುವುದಿಲ್ಲ.

ಸ್ಥಳೀಯ ಜನರಲ್ಲಿ ನೀರು ನಿರ್ವಹಣೆ, ಮಳೆ ನೀರು ಸಂಗ್ರಹ, ಪರಿಸರ ಸಂರಕ್ಷಣೆ, ಆರೋಗ್ಯ, ಅಕ್ಷರ ಇನ್ನಿತರೆಗಳ ಜಾಗೃತಿ ಮೂಡಿ ಸಾಮಾಜಿಕ ಮತ್ತು ದೈನಂದಿನ ಬದುಕಿನ ಮಟ್ಟ ಸುಧಾರಣೆ ಆಗಲಿದೆ. ಸುತ್ತಲಿನ ಗ್ರಾಮಗಳಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿ ಜನರ ತಲಾ ಆದಾಯ ; ಆರೋಗ್ಯ : ಶಿಕ್ಷಣ : ನೈರ್ಮಲ್ಯಕ್ಕೆ ಸಹಜವಾಗಿಯೇ ಪ್ರಾಶಸ್ತ್ಯ ಸಿಗಲಿದೆ.

ಒಟ್ಟಾರೆ ಈ ಯೋಜನೆ ಜಾರಿಯಿಂದಾಗಿ ವಜ್ರಬಂಡಿ ಮತ್ತು ಸುತ್ತಲಿನ ಗ್ರಾಮಗಳ ಜನರ ಜೀವನಮಟ್ಟ ಸುಧಾರಣೆಗೊಂಡು ಆರ್ಥಿಕ ಸ್ಥಿತಿಯೂ ಗಣನೀಯವಾಗಿ ಅಭಿವೃದ್ಧಿ ಹೊಂದಲಿದೆ.